# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ: 22/09/2021 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ಕೋವಿಡ್-19 ರೋಗ ಲಕ್ಷಣಗಳು ಕಂಡು ಬಂದ ಹಿನ್ನಲೆಯಲ್ಲಿ ಸಭೆಯನ್ನು ನಡೆಸಲು ಸಾಧ್ಯವಾಗಲ್ಲಿಲ ಹಾಗೂ ಮೂರನೇ ಶನಿವಾರ ಮಾನ್ಯ ಮುಖ್ಯಮಂತ್ರಿಗಳು ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಪರಿವೀಕ್ಷಣೆ ಹಮ್ಮಿಕೊಂಡಿದ್ದ ಕಾರಣ ಸಭೆಯನ್ನು ಮುಂದೂಡಲಾಗಿತ್ತು. ಅದಕ್ಕೆ ಬದಲಾಗಿ ದಿನಾಂಕ: 02.02.2022 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಆರ್. ವೆಂಕಟಚಲಪತಿ ಕ.ಆ.ಸೇ, | ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ | 9513322144 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂ.174 | 9480688174 |
| 3 | ಶ್ರೀ ಬಿ.ಎಸ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀಧೀನ ದಯಾಲ್ | ಸಾರ್ವಜನಿಕರು | 9742436676 |
| 5 | ಶ್ರೀ ಬಿ. ಗೋವಿಂದ ಸ್ವಾಮಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 6 | ಶ್ರೀ ಎನ್ ಗೋಪಾಲಾ ಕೃಷ್ಣ | ಸಾರ್ವಜನಿಕರು | - |
| 7 | ಶ್ರೀ ರವಿಚಂದ್ರರಾವ್ | ಸಾರ್ವಜನಿಕರು | 9844167069 |
| 8 | ಶ್ರೀಮತಿ ಎ ಆರತಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 9 | ಶ್ರೀ ವೈ.ಡಿ ಶಂಕರಪ್ಪ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9845123030 |
| 10 | ಶ್ರೀಮತಿ ಚಿತ್ರ ಪ್ರಣೀತ್ | ಸಾರ್ವಜನಿಕರು | 9880038525 |
| 11 | ಶ್ರೀಮತಿ ವಿನುತಾ ಕೌಲ್ | ಸಾರ್ವಜನಿಕರು | 9900575406 |
| 12 | ಶ್ರೀಮತಿ ವಿನುತಾ ಅಶ್ವಥ | ಸದಸ್ಯರು 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 8217654882 |
| 13 | ಶ್ರೀ ಹನುಮಂತರಾಯ.ಟಿ | ಸ.ಕಾ.ಅ. (ಹೆಚ್.ಎಸ್.ಆರ್ ಉಪವಿಭಾಗ) | 9480688256 |
| 14 | ಶ್ರೀ ಟಿ ಅಶೋಕ್ ಕುಮಾರ್ | ಪೋಲಿಸ್ ಇನ್ಸ್‌ಪೆಕ್ಟರ್ ಸಂಚಾರಿ ಇಬ್ಬಲೂರು ಪೋಲಿಸ್ ಠಾಣೆ | 9480801426 |
| 15 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಉಪವಿಭಾಗ | 9480685984 |

**(ಮು.ತಿ.ನೋ)**

Scanned with

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 16 | ಶ್ರೀ ನಾಗರಾಜ್ ಎ | ಸ.ಕಾ..ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ | 98454440೧೮ |
| 17 | ಶ್ರೀ ಸಾಯಿಬಣ್ಣ | ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444039 |
| 18 | ಶ್ರೀ ವಿಕಾಸ್ ಡಿ.ಎಸ್. | ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | 9110823989 |
| 19 | ಎಸ್ ಸುಧೀರ್ | ಪಶುಸಂಗೋಪಾನೆ ಇಲಾಖೆ | 9845226800 |
| 20 | ಶ್ರೀ ಹರೀಶ್.ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 21 | ಶ್ರೀ ಸುನೀಲ್ ಹೆಚ್.ವೈ | ಕಿರಿಯ ಅಭಿಯಂತರರು, ಬೆಸ್ಕಾಂ ಎಸ್-20 ಉಪವಿಭಾಗ | 9449840477 |
| 22 | ಶ್ರೀ ವಿನೋದ್ ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ 174 | 9844629911 |
| 23 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ. ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು. ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ. ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿದರು.

- **ಸಂಚಾರಿ ವಿಭಾಗ**

1. ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯ ಪ್ರಮುಖ ಸಂಚಾರಿ ದಟ್ಟಣೆಯ ರಸ್ತೆಗಳಲ್ಲಿ ಟ್ರಾಫೀಕ್ ಸಿಗ್ನಲ್ ಅಳವಡಿಸಲು ಹಾಗೂ ಶಾಲೆಯ ಮುಂಭಾಗ, ರಸ್ತೆಗಳ ತಿರುವಿನಲ್ಲಿ ಮತ್ತು ಅಪಘಾತ ಸಂಭವಿಸುವ ಸ್ಥಳಗಳಲ್ಲಿ ವೈಜ್ಞಾನಿಕವಾಗಿ ಸ್ಪೀಡ್ ಹಂಪ್ಸ್‌ನ್ನು ಹಾಕಲು ಸದಸ್ಯರು, ಕಲ್ಯಾಣ ಸಂಘದ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಟಿ ಅಶೋಕ್ ಕುಮಾರ್ ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರು ಟ್ರಾಫೀಕ್ ಇಂಜಿನಿಯರಿಂಗ್ ಕೋಶ ವಿಭಾಗದಿಂದ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಸದರಿ ವಿಭಾಗದವರೊಂದಿಗೆ ಜಂಟಿಯಾಗಿ ತಪಾಸಣೆ ಮಾಡಿ ಪ್ರಮುಖ ಸಂಚಾರಿ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಹಲವು ರಸ್ತೆಗಳಲ್ಲಿ ಹಳೆಯ ವಾಹನಗಳನ್ನು ರಸ್ತೆ ಬದಿಯಲ್ಲಿ ತುಂಬ ವರ್ಷಗಳಿಂದ ನಿಲ್ಲಿಸಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಮತ್ತು ಬಿಬಿಎಂಪಿ ಪೌರಕಾರ್ಮಿಕರಿಂದ ಕಸ ಗುಡಿಸುವಿಕೆಗೂ ಅಡ್ಡಿಯಾಗುತ್ತಿದ್ದು, ಹಾಗೂ ಇದರಿಂದ ಇತರೆ ಚಟುವಟಿಕೆಗಳಿಗೆ ದುರಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಸಭೆಯ ಸದಸ್ಯರು, ಕಲ್ಯಾಣ ಸಂಘದ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಟಿ ಅಶೋಕ್ ಕುಮಾರ್ ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರು Unclaimed ವಾಹನಗಳು ಸುಮಾರು ವರ್ಷಗಳಿಂದ ಒಂದೆ ಕಡೆ ನಿಲ್ಲಿಸಿದ್ದರೆ ಅಂತಹ ವಾಹನಗಳನ್ನು ವಶಪಡಿಸಿಕೊಳ್ಳಲಾಗುವುದೆಂದು ಹಾಗೂ ಇಂತಹ ವಾಹನಗಳನ್ನು ಪಟ್ಟಿ ಮಾಡಿ ನೀಡಿದ್ದಲ್ಲಿ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯ ಪ್ರಮುಖ ಮುಖ್ಯ ರಸ್ತೆಗಳಲ್ಲಿ (27,24,19)ನೇ ಮುಖ್ಯ ರಸ್ತೆ ಹಾಗೂ (13,17)ನೇ ಅಡ್ಡ ರಸ್ತೆ ವಾಣಿಜ್ಯ ಚಟುವಟಿಕೆ ಮಳಿಗೆ ಮುಂಭಾಗದಲ್ಲಿ ಕೆಲವು ಖಾಸಗಿ ವ್ಯಕ್ತಿಗಳು ಅಡ್ಡಾದಿಡ್ಡವಾಗಿ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸಭೆಯ ಸದಸ್ಯರು, ಕಲ್ಯಾಣ ಸಂಘದ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಟಿ ಅಶೋಕ್ ಕುಮಾರ್ ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರು ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

Scanned with

4. ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ 18ನೇ ಅಡ್ಡ ರಸ್ತೆಯಲ್ಲಿ ತಳ್ಳುವಗಾಡಿಗಳಲ್ಲಿ ವ್ಯಾಪಾರ ವಹಿವಾಟನ್ನು ನಡೆಸುತ್ತಿರುವುದನ್ನು ಬಿಬಿಎಂಪಿ ಅಧಿಕಾರಿ/ಸಿಬ್ಬಂದಿ ವರ್ಗದವರ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆಯಲ್ಲಿ ತೆರವುಗೊಳಿಸಿರುತ್ತಾರೆ. ಆದರೆ ಸದರಿ ಸ್ಥಳಗಳಲ್ಲಿ ಕಟ್ಟಡದ ಮಾಲೀಕರುಗಳು ವಾಹನಗಳನ್ನು ನಿಲಿಸುತ್ತಿದ್ದು, ಕೂಡಲೇ ತಮ್ಮ ತಮ್ಮ ಕಟ್ಟಡಗಳ ಬೆಸ್ಮೆಂಟ್‌ನಲ್ಲಿ ವಾಹನಗಳನ್ನು ನಿಲ್ಲಿಸುವಂತೆ ಮಾಹಿತಿ ನೀಡಿ ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ಕ್ರಮ ವಹಿಸಬೇಕೆಂದು ಸದಸ್ಯರು ಮತ್ತು ಕಲ್ಯಾಣ ಸಂಘಗಳ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಟಿ ಅಶೋಕ್ ಕುಮಾರ್ ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರು ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.

- **ತೋಟಗಾರಿಕೆ**

1. ಇಂದಿನ ಸಭೆಗೆ ಶ್ರೀ ಚಂದ್ರಶೇಖರ, ತೋಟಗಾರಿಕೆ ಅಧೀಕ್ಷಕರು ರವರು ಸಭೆಗೆ ಗೈರು ಹಾಜರಾಗಿರುತ್ತಾರೆ. ಅವರ ಪರವಾಗಿ ಶ್ರೀ ನರಸಪ್ಪ ತೋಟಗಾರಿಕೆ ನಿರೀಕ್ಷಕರು, ಹಾಜರಾಗಿರುತ್ತಾರೆ. ಈ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ, ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯ 1ನೇ ಸೆಕ್ಟರ್ ಬೆಂಗಳೂರು ಒನ್ ಉದ್ಯಾನವದ ಒಳಗಡೆ ಹಾಗೂ ಇನ್ನಿತರೆ ಸೆಕ್ಟರ್‌ವಾರು ಉದ್ಯಾನವನಗಳಲ್ಲಿ ಪಾದಚಾರಿ ಮಾರ್ಗ ತುಂಬ ಹುಬ್ಬು ತಗ್ಗುಗಳಿಂದ ಕೂಡಿದ್ದು, ನಾಗರೀಕರಿಗೆ ನಡೆದಾಡಲು ತೊಂದರೆಯಾಗುತ್ತಿದೆ ಹಾಗೂ ಉದ್ಯಾನವದಲ್ಲಿ ದೀಪಗಳ ನಿರ್ವಹಣೆ ಇಲ್ಲದೆ ಇರುವುದು ಕಂಡು ಬಂದಿರುತ್ತದೆ. ಮಳೆ ನೀರು ಕೊಯ್ಲಿನ ಸೌಲಭ್ಯಗಳನ್ನು ಇಲ್ಲದೆ ಇರುವುದರಿಂದ ಮಳೆ ನೀರು ಚರಂಡಿಗೆ ಹರಿದು ವ್ಯರ್ಥವಾಗುತ್ತಿರುತ್ತದೆ ಆದುದರಿಂದ ಮಳೆ ನೀರು ಕೊಯ್ಲಿಗಳನ್ನು ಅಳವಡಿಸಲು ಸದಸ್ಯರು, ಕಲ್ಯಾಣ ಸಂಘದ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.
2. ಹೆಚ್.ಎಸ್.ಆರ್ ಬಡಾವಣೆ 1ನೇ ಸೆಕ್ಟರ್ ಬೆಂಗಳೂರು ಒನ್ ಉದ್ಯಾನವದ ಒಳಗಡೆ Dry waste Center ನಲ್ಲಿ 2 ಶೌಚಾಲಯಗಳು ಪೌರಕಾರ್ಮಿಕರಿಗೆ ಕಲ್ಪಿಸಲಾಗಿದ್ದು, ಆದರೆ ಉಪಯೋಗಿಸುವ ಸ್ಥಿತಿಯಲ್ಲಿರುವುದಿಲ್ಲ ಸದಸ್ಯರು ಹಾಗೂ ಕಲ್ಯಾಣ ಸಂಘದ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.
3. ಹಿಂದಿನ ಸಭೆಯ ದಿನಾಂಕ: 20.12.2021 ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯಲ್ಲಿ ಬೆಂಗಳೂರು ಒನ್ ಉದ್ಯಾನವದ ಒಳಗಡೆ ನಂದಿನಿ ಬೂತ್ ಅಂಗಡಿ ವ್ಯಾಪಾರ ಮಾಡುತ್ತಿದ್ದು, ಅದರಲ್ಲಿ ಟೀ. ಕಾಫೀ ಇತ್ಯಾದಿ ವ್ಯಾಪಾರ ನಡೆಯುತ್ತಿರುವ ಬಗ್ಗೆ ವಾರ್ಡ್ ಸದಸ್ಯರು, 1ನೇ ಸೆಕ್ಟರ್ ಕಲ್ಯಾಣ ಸಂಘಗಳ ಪ್ರತಿನಿದಿಗಳು ಹಾಗೂ ಸ್ಥಳೀಯರು ಸಭೆಯಲ್ಲಿ ಪ್ರಸ್ತಾಪಿಸಿರುವಂತೆ ಇದುವರೆಗೂ ಯಾವುದೇ ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ರವರು ಸಭೆಯಲ್ಲಿ ಹಾಜರಿದ್ದ ಶ್ರೀ ನರಸಪ್ಪ ತೋಟಗಾರಿಕೆ ನಿರೀಕ್ಷಕರು ರವರಿಗೆ ಶೀಘ್ರದಲಿಯೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದ್ದರು ಹಾಗೂ ಮುಂದಿನ ಸಭೆಗೆ ತೋಟಗಾರಿಕೆ ಅಧೀಕ್ಷಕರವರಿಗೆ ಹಾಜರಾಗುವಂತೆ ಮತ್ತೊಮ್ಮೆ ಸೂಚಿಸಿದ್ದರು.

- **ಅರಣ್ಯ ಇಲಾಖೆ**

1. ಹಿಂದಿನ ಹಲವು ಸಭೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಹಾಗೂ 7 ಅಡಿ ಎತ್ತರಕಿಂತ ಕಡಿಮೆ ಇರುವ ಮರದ ರೆಂಬೆಗಳನ್ನು ಹಿಂದಿನ ಸಭೆಯಲ್ಲಿ ಕತ್ತರಿಸುವಂತೆ ಪ್ರಸ್ತಾಪಿಸಲಾಗಿದ್ದು, ಇದುವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಸಭೆಯಲ್ಲಿ ಸದಸ್ಯರು ಮತ್ತು ಕಲ್ಯಾಣ ಸಂಘದ ಅಧಿಕಾರಿಗಳು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಹೆಚ್.ಆರ್ ಹರೀಶ್ ಅರಣ್ಯ ವಲಯ ಅಧಿಕಾರಿಗಳು ಈ ಬಗ್ಗೆ ಕಲ್ಯಾಣ ಸಂಘಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಮನೆಯ ಮಾಲೀಕರು ಪ್ರತ್ಯೇಕವಾಗಿ ಅರ್ಜಿ ಪಡೆದು ಸರ್ವೆ ಮಾಡಿ ತೆರವುಗೊಳಿಸಲು ಕ್ರಮ ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಶೀಘ್ರವಾಗಿ ಕ್ರಮವಹಿಸುವಂತೆ ಸೂಚಿಸಿದರು.

Scanned with

- **<u>ಬೆಸ್ಕಾಂ</u>**

1. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ ಮ್ಯಾಕ್‌ಡೊನಾಲ್ಡ್ಸ್ ಸಿಗ್ನಲ್ ಬಳಿ ಪಾದಚಾರಿ ಮಾರ್ಗವನ್ನು ಅಗೆದಿದ್ದು, ರಿಸ್ಟೋರ್ ಮಾಡಿಸಿರುವುದಿಲ್ಲವೆಂದು ಬಿ.ಎನ್.ಆರ್ ರೆಡ್ಡಿ ರವರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸುನಿಲ್ ಕಿರಿಯ ಅಭಿಯಂತರರು, ಬೆಸ್ಕಾಂರ ರವರು 2 ದಿನಗಳಲ್ಲಿ ವೆಟ್‌ಮಿಕ್ಸ್ ಹಾಕಿಸಿ ರಿಸ್ಟೋರ್ ಮಾಡಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಬಿ.ಎನ್.ಆರ್ ರೆಡ್ಡಿ ರವರು ಮಾತನಾಡುತ್ತಾ, ವಾರ್ಡ್ ಸಮಿತಿ ಸಭೆಗೆ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ರವರನ್ನು ಕಳುಹಿಸುತ್ತಿರುವ ಬಗ್ಗೆ ಆಕ್ಷೇಪಿಸಿರುತ್ತಾರೆ. ಅಧ್ಯಕ್ಷರು/ನೋಡಲ್ ಅಧಿಕಾರಿಗಳು ರವರು ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ದೂರವಾಣಿ ಮುಖಾಂತರ ಕರೆ ಮಾಡಿ ಮುಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರಾಗಲಿ ಅಥವ ಕಾರ್ಯಪಾಲಕ ಅಭಿಯಂತರರು ಸಭೆಗೆ ಹಾಜರಾಗಲು ಸೂಚಿಸಿದರು.

- **<u>ಕಾಮಗಾರಿ</u>**

1. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ ಚರಂಡಿಗಳಲ್ಲಿ ಸಮರ್ಪಕವಾಗಿ ಹೂಳೆತ್ತುತ್ತಿಲ್ಲವೆಂದು ಶ್ರೀ ಬಿ.ಎನ್.ಆರ್ ರೆಡ್ಡಿ ರವರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಈಗಾಗಲೇ ತಗ್ಗು ಪ್ರದೇಶಗಳಲ್ಲಿ ಹಾಗೂ ಮಳೆಯಿಂದಾಗಿ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳೆತ್ತಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಸೆಕ್ಟರ್‌ವಾರು ವೇಳಾಪಟ್ಟಿಯನ್ನು ಸಿದ್ದಪಡಿಸಿಕೊಂಡು ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳೆತ್ತಲು ಕ್ರಮ ವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದ್ದರು.

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಖಾಸಗಿ ಕಟ್ಟಡಗಳ ಸರ್ವೆ ಮಾಡಿ ನೋಟಿಸ್ ನೀಡುವಂತೆ ರಿಟ್ ಅರ್ಜಿ ಸಂಖ್ಯೆ: 41517/2019ರಲ್ಲಿ ಮಾನ್ಯ ಉಚ್ಛನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ಮಾನ್ಯ ನ್ಯಾಯಾಲಯವು ವಾರ್ಡ್ ವ್ಯಾಪ್ತಿಗಳಲ್ಲಿ 2019ರಿಂದ ಪ್ರಸ್ತುತ ದಿನಾಂಕದವರೆಗೆ ನಿರ್ಮಿಸುತ್ತಿರುವ/ನಿರ್ಮಿಸಿರುವ ಕಟ್ಟಡಗಳ ಸರ್ವೆ ಮಾಡಿ ನೋಟಿಸ್ ಜಾರಿಮಾಡಿರುವ ಬಗ್ಗೆ ಶ್ರೀ ಬಿ.ಎನ್.ಆರ್ ರೆಡ್ಡಿ ಮತ್ತು ಕಲ್ಯಾಣ ಸಂಘಗಳ ಪದಾಧಿಕಾರಿಗಳು ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು 2019 ರಿಂದ ಪ್ರಸ್ತುತ ದಿನಾಂಕದವರೆಗೆ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಒಟ್ಟು 71 ಕಟ್ಟಡಗಳ ಪೈಕಿ 45 ಕಟ್ಟಡಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

3. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯಲ್ಲಿ 2021-22ನೇ ಸಾಲಿನ ಒಂಟಿ ಮನೆ ಯೋಜನೆಯಡಿಯಲ್ಲಿ ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಉಪವಿಭಾಗ ರವರಿಂದ ಮಹಜರ್ ಮಾಡಿರುವ ಒಟ್ಟು 28 ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗ ಅಲ್ಪ ಸಂಖ್ಯಾ ವರ್ಗದ ಒಟ್ಟು 3 ಫಲಾನುಭವಿಗಳು ಆಯ್ಕೆಯಾಗಿರುತ್ತಾರೆ ಎಂದು ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ.

- **<u>ಘನತ್ಯಾಜ್ಯ</u>**

1. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಶ್ರೀ ವಿನೋದ್ ಹಿರಿಯ ಆರೋಗ್ಯ ಪರಿವೀಕ್ಷಕ ರವರು ಅಂದಾಜು 2.00 ಲಕ್ಷ ಜನಸಂಖ್ಯೆ ಹೊಂದಿರುವ ಈ ಪ್ರದೇಶದಲ್ಲಿ, ಒಟ್ಟು 198 ಕಿ.ಮೀ ರಸ್ತೆ ಒಳಪಡುತ್ತಿದ್ದು, 98 ಪೌರಕಾರ್ಮಿಕರು, 4 ಸೂಪರ್‌ವೈಸರ್, 34 ಬ್ಲಾಕ್, 1250 ಮೀಟರ್‌ಗೆ ಒಂದು ಬ್ಲಾಕ್ ನಿರ್ಮಿಸಲಾಗಿರುತ್ತದೆ ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಅಧ್ಯಕ್ಷರು/ ನೋಡಲ್ ಅಧಿಕಾರಿ ರವರು 750 ಮೀಟರ್‌ಗೆ ಒಂದು ಬ್ಲಾಕ್ ಇರಬೇಕೆಂದು ಹಾಗೂ ಪೌರಕಾರ್ಮಿಕರು ಕೊರತೆ ಇರುವುದಾಗಿ ಈ ಬಗ್ಗೆ ಅಧೀಕ್ಷಕ ಅಭಿಯಂತರರು, ರವರೊಂದಿಗೆ ಚರ್ಚಿಸಿ ಪೌರಕಾರ್ಮಿಕರನ್ನು ಹೆಚ್ಚಿಸುವಂತೆ ಶ್ರೀ ವಿನೋದ್ ಜಿ ಹಿರಿಯ ಆರೋಗ್ಯ ಪರಿವೀಕ್ಷಕ ರವರಿಗೆ ಸೂಚಿಸಿದರು.

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು, (ಮಹಾದೇವಪುರ ವಲಯ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಜಂಟಿ ಆಯುಕ್ತರು, ಮಹಾದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ/ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with